**SC No. 124/2018**
**C/w 311/2023**
**C/w 42/2026**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. SC No. 124/2018 C/w 311/2023**
**C/w 42/2026**

| ಸಾಕ್ಷಿಯ ಹೆಸರು | ಶ್ರೀ. ಉಮೇಶ್ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಶಿವಣ್ಣ | 8 | 3 |
| ವಯಸ್ಸು | 31 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **21.05.2026.** | |
| ಉದ್ಯೋಗ | ಆಟೋ ಚಾಲಕ | | |
| ವಾಸ ಸ್ಥಳ | ಕುಮಾರಸ್ವಾಮಿ ಲೇಔಟ್ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನನಗೆ ಆರೋಪಿತರು ಗೊತ್ತಿಲ್ಲ. ಮೃತ ರಘು ರವರ ಪರಿಚಯ ಇದೆ. ಆತ ನನ್ನ ಸ್ನೇಹಿತನಾಗಿದ್ದ. ಆತ ಏನು ಕೆಲಸ ಮಾಡುತ್ತಿದ್ದ ಎಂದು ಗೊತ್ತಿಲ್ಲ. ಆತ ನಮ್ಮ ಏರಿಯಾದಲ್ಲಿ ಇದ್ದರಿಂದ ಗೊತ್ತು. ನನ್ನ ಸ್ನೇಹಿತ ನವೀನ್ ಕರೆ ಮಾಡಿ ರಘುನನ್ನು ಹೊಡೆದುಹಾಕಿದ್ದಾರೆ ಎಂದು ದಿನಾಂಕ 22.08.2017 ರಂದು ತಿಳಿಸಿದ. ನಾನು ಬೆಳಗ್ಗೆ ಆಸ್ಪತ್ರೆಯ ಬಳಿ ಹೋಗಿದ್ದೆವು. ಅಲ್ಲಿ ಪೋಲೀಸರು ನನ್ನ ಸಹಿಯನ್ನು ಈಗ ತೋರಿಸಿದ ದಾಖಲೆಗೆ ಪಡೆದುಕೊಂಡಿದ್ದು ಸದರಿ ಶವ ಪಂಚನಾಮೆಯನ್ನು ನಿಶಾನೆ.ಪಿ. 13 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿಲ್ಲ. ನನಗೆ ಯಾರು ಯಾವ ರೀತಿ ರಘುನನ್ನು ಕೊಲೆ ಮಾಡಿದ್ದಾರೆ ಎಂದು ತಿಳಿದುಬಂದಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಮೃತ ರಘು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದು ಸುಮಾರು 4 – 5 ವರ್ಷಗಳ ಹಿಂದೆ 2 ನೇ ಆರೋಪಿಯೊಂದಿಗೆ ತಲಘಟ್ಟಪುರ ಠಾಣೆಯಲ್ಲಿ ವ್ಯಕ್ತಿಯನ್ನು ಕೊಲೆ ಮಾಡಿದ್ದಾಗಿ ಕೇಸು ಇದ್ದು

**SC No. 124/2018**
**C/w 311/2023**
**C/w 42/2026**

ಆಗಾಗ್ಗೆ ಸಾರ್ವಜನಿಕರೊಂದಿಗೆ ಜಗಳ ಮಾಡಿಕೊಂಡು ಹಲವಾರು ಕೇಸುಗಳನ್ನು ಹಾಕಿಸಿಕೊಂಡಿದ್ದು, ಮೃತ 2 ನೇ ಆರೋಪಿ ನೀನು ಈ ರೀತಿ ಮಾಡಿದರೆ ನನ್ನ ಹೆಸರು ಕೆಡುವುದು ಎಂದು ಹೆಚ್ಚರಿಕೆ ನೀಡಿದ್ದರು ಎಂದರೆ ಸರಿ ಅಲ್ಲ. ಈ ವಿಚಾರದಿಂದ 2 ನೇ ಆರೋಪಿ ದ್ವೇಷ ಸಾಧಿಸಿಸುತ್ತಿದ್ದು, ಜೈಲ್ ನಿಂದ ಹೊರಗೆ ಬಂದ ನಂತರ ಮೃತನ ತಮ್ಮ ನರೇಂದ್ರನ ಬಳಿ ಹೇಳಿ ಕಳುಹಿಸಿದ್ದು, ಆ ವಿಚಾರವನ್ನು ನನಗೆ ತಿಳಿಸಿದ್ದರು ಎಂದರೆ ಸರಿ ಅಲ್ಲ. ನಾನು ಈ ಬಗ್ಗೆ ಮೃತನಿಗೆ ಹುಷಾರಾಗಿರುವಂತೆ ಹೇಳಿದ್ದೆ ಎಂದೆರ ಸರಿ ಅಲ್ಲ. ದಿನಾಂಕ 21.08.2017 ರಂದು ರಘು ತನ್ನ ಸ್ನೇಹಿತರ ಜೊತೆಗೆ ಪಾಂಡರಪುರದ ದೇವಸ್ಥಾನಕ್ಕೆ ಹೋಗುವುದಾಗಿ ಹೇಳಿ ನನ್ನನ್ನೂ ಕರೆದಿದ್ದು, ನಾನು ಹೋಗಲಿಲ್ಲ ಹಾಗೂ ರಾತ್ರಿ 12.10 ಕ್ಕೆ ವಾಪಸ್ಸು ಬರುತ್ತಿದ್ದಾಗ ಮೃತ ಓಡಿಸಿಕೊಂಡು ಬರುತ್ತಿದ್ದ ಕಾರನ್ನು 2 ನೇ ಆರೋಪಿ ಮಾರಕಾಸ್ತ್ರಗಳನ್ನು ಹೊಂದಿ ಅಡ್ಡಗಟ್ಟಿ ಆತನ ತಲೆ, ಬಲಕೈ ಹೊಟೆ, ಬೆನ್ನು ಬಲಗಾಲು ಮತ್ತು ಮಂಡಿಯ ಬಳಿ ಕತ್ತರಿಸಿ ತಿವಿದು, ತೀವ್ರ ಸ್ವರೂಪದ ಗಾಯಗಳನ್ನು ಮಾಡಿ ಕೊಲೆ ಮಾಡಿದ್ದು, ಆತನ ಜೊತೆಗೆ ಇದ್ದ ಮಧು ಆತನ ಮೆಲೆ ಹಲ್ಲೆ ಮಾಡಿದ ವಿಚಾರ ನನಗೆ ತಿಳಿದಿದ್ದು ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಹೇಳಿಕೆಯನ್ನು ಭಾಗವನ್ನು ನಿಶಾನೆ.ಪಿ. 13 (ಎ) ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ : ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.